ಅಕ್ರಮ ಫ್ಲೆಕ್ಸ್ ಅಳವಡಿಕೆ ಆರೋಪ: ಕಂಬಳ ಆಯೋಜಕರ ವಿರುದ್ಧ ದೂರು

ಬೆಂಗಳೂರು: ಸಾರ್ವಜನಿಕ ಸ್ಥಳಗಳಲ್ಲಿ ಅಕ್ರಮವಾಗಿ ಫ್ಲೆಕ್ಸ್ ಮತ್ತು ಬ್ಯಾನರ್ ಅಳವಡಿಸಿದ್ದ ಆರೋಪದಡಿ ಬೆಂಗಳೂರು ಕಂಬಳ ಆಯೋಜಕರ ವಿರುದ್ಧ ಸದಾಶಿವನಗರ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದೆ. ಬಿಬಿಎಂಪಿ ವಾರ್ಡ್ ಸಂಖ್ಯೆ 35ರ ಕಂದಾಯ ನಿರೀಕ್ಷಕ ಕೆ. ಸಿದ್ದಗಂಗಯ್ಯ ಎಂಬವರು ನೀಡಿದ ದೂರಿನ ಮೇರೆಗೆ ಸದಾಶಿವನಗರ ಠಾಣೆ ಪೊಲೀಸರು ಬೆಂಗಳೂರು ಕಂಬಳ ಆಯೋಜಕರ ವಿರುದ್ಧ, ಕರ್ನಾಟಕ ತೆರೆದ ಸ್ಥಳಗಳ ವಿಕಾರ ಕಾಯಿದೆಯಡಿ ಪ್ರಕರಣ ದಾಖಲಿಸಲಿದ್ದಾರೆ. ಬಿಬಿಎಂಪಿ ವಾರ್ಡ್ 35ರ ವ್ಯಾಪ್ತಿಯ ಮೇಖ್ರಿ ವೃತ್ತ ಮತ್ತು ಬಳ್ಳಾರಿ ರಸ್ತೆಯಲ್ಲಿ ಬೆಂಗಳೂರು ಕಂಬಳ ನಮ್ಮ ಕಂಬಳ ಕಾರ್ಯಕ್ರಮಕ್ಕೆ ಶುಭಾಶಯ ಕೋರಿ ಅನಧಿಕೃತವಾಗಿ ಫ್ಲೆಕ್ಸ್ ಮತ್ತು ಬ್ಯಾನರ್‌ಗಳನ್ನು ಅಳವಡಿಸಲಾಗಿದೆ. ಈ ಮೂಲಕ ನಗರದ ಸೌಂದರ್ಯಕ್ಕೆ ಧಕ್ಕೆ ಉಂಟು ಮಾಡಿ ಸಾರ್ವಜನಿಕರಿಗೆ ತೊಂದರೆ ಉಂಟು ಮಾಡಲಾಗಿದೆ. ನ.25ರಂದು ಸ್ಥಳ ವೀಕ್ಷಣೆ ಮಾಡಿ ಫ್ಲೆಕ್ಸ್ ಮತ್ತು ಬ್ಯಾನರ್‌ಗಳನ್ನಮು ತೆರವುಗೊಳಿಸಲಾಗಿದೆ. ಆಯೋಜಕರು ಯಾವುದೇ ಅನುಮತಿ ಪಡೆಯದೆ ಸಾರ್ವಜನಿಕ ಸ್ಥಳಗಳಲ್ಲಿ ಅನಧಿಕೃತವಾಗಿ ಫ್ಲೆಕ್ಸ್ ಮತ್ತು ಬ್ಯಾನರ್ ಅಳವಡಿಸಿ ಹೈಕೋರ್ಟ್ ಆದೇಶ ಮತ್ತು ನಿಯಮಗಳನ್ನು ಉಲ್ಲಂಘಿಸಿದ್ದಾರೆ. ಹೀಗಾಗಿ ಆಯೋಜಕರ ವಿರುದ್ಧ ಸೂಕ್ತ ಕಾನೂನು ಕ್ರಮ ಕೈಗೊಳ್ಳುವಂತೆ ಬಿಬಿಎಂಪಿ ಅಧಿಕಾರಿಗಳು ದೂರಿನಲ್ಲಿ ಕೋರಿದ್ದಾರೆ.

ಶಿವಮೊಗ್ಗದ ಕರ್ನಾಟಕ ಸಂಘ ಕೊಡಮಾಡುವ ಹಾಮಾನಾ ಅಂಕಣ ಸಾಹಿತ್ಯ ಪ್ರಶಸ್ತಿಗೆ ಶಶಿಧರ ಹಾಲಾಡಿ ಅವರು ರಚಿಸಿದ, 'ಉರುಳಿದ ಕಟ್ಟಡ ಮರಳಿನ ನೆನಪು' ಕೃತಿ ಆಯ್ಕೆಯಾಗಿದ್ದು, ಶಿವಮೊಗ್ಗದಲ್ಲಿ ನಡೆದ ಸಮಾರಂಭದಲ್ಲಿ ಪ್ರಶಸ್ತಿ ಪ್ರಧಾನ ಮಾಡಲಾಯಿತು. ಪ್ರಶಸ್ತಿಯು 10,000 ರು. ಗೌರವ ಧನ ಮತ್ತು ಫಲಕ ಒಳಗೊಂಡಿದೆ.

ವೈರಲ್ ಆಡಿಯೋ: ನಿರ್ಮಾಪಕ ಉಮಾಪತಿ ಗೌಡ ದೂರು ದಾಖಲು

ಬೆಂಗಳೂರು: ಪೊಲೀಸ್ ಇನ್‌ಸ್ಪೆಕ್ಟರ್ ವರ್ಗಾವಣೆ ವಿಚಾರದಲ್ಲಿ ತಮ್ಮ ಹೆಸರಿನಲ್ಲಿ ಸಾಮಾಜಿಕ ಜಾಲತಾಣದಲ್ಲಿ ವೈರಲ್ ಆಗಿರುವ ಆಡಿಯೋಗೆ ಸಂಬಂಧಿಸಿದಂತೆ ಕಾಂಗ್ರೆಸ್ ಮುಖಂಡ ಹಾಗೂ ಸಿನಿಮಾ ನಿರ್ಮಾಪಕ ಉಮಾಪತಿ ಶ್ರೀನಿವಾಸಗೌಡ ಎಚ್‌ಎಸ್‌ಆರ್ ಪೊಲೀಸ್ ಠಾಣೆಯಲ್ಲಿ ದೂರು ನೀಡಿದ್ದಾರೆ. ಉಮಾಪತಿ ಶ್ರೀನಿವಾಸ ಗೌಡ ಹಾಗೂ ಸಾಮಾಜಿಕ ಕಾರ್ಯಕರ್ತ ವಿಜಯ್ ಡೆನ್ನಿಸ್ ನಡುವೆ ಪೊಲೀಸ್ ಇನ್‌ಸ್ಪೆಕ್ಟರ್ ಒಬ್ಬರ ವರ್ಗಾವಣೆ ವಿಚಾರದಲ್ಲಿ ನಡೆದಿದೆ ಎಂದು ಹೇಳಲಾದ ಆಡಿಯೋ ಸಾಮಾಜಿಕ ಜಾಲತಾಣದಲ್ಲಿ ವೈರಲ್ ಆಗಿದೆ. ಆದರೆ, ಈ ವೈರಲ್ ಆಡಿಯೋದಲ್ಲಿರುವ ಧ್ವನಿ ತನ್ನದಲ್ಲ. ಯಾರು ಕಿಡಿಗೇಡಿಗಳು ಮಾರ್ಫಿಂಗ್ ಮಾಡಿದ್ದಾರೆ.

ಆ ವ್ಯಕ್ತಿಗಳ ವಿರುದ್ಧ ಕಾನೂನು ಕ್ರಮಕೈಗೊಳ್ಳುವಂತೆ ಉಮಾಪತಿ ಶ್ರೀನಿವಾಸ ಗೌಡ ಅವರು ದೂರಿನಲ್ಲಿ ಕೋರಿದ್ದಾರೆ. ತನ್ನ ವಿರುದ್ಧ ತೇಜೋವಧೆಗೆ ಸಂಚು ರೂಪಿಸಿದ ವ್ಯಕ್ತಿಗಳ ವಿರುದ್ಧ ಡಿಸಿಪಿ ಹಾಗೂ ನಗರ ಪೊಲೀಸ್ ಆಯುಕ್ತರು, ಲೋಕಾಯುಕ್ತಕ್ಕೂ ದೂರು ನೀಡುತ್ತೇನೆ. ವಿಜಯ್ ಡೆನ್ನಿಸ್ ಪರಿಚಯವಿದೆ. ಆದರೆ. ಯಾವ ಇನ್‌ಸ್ಪೆಕ್ಟರ್ ವರ್ಗಾವಣೆ ಬಗ್ಗೆ ನಾನು ಯಾರೊಂದಿಗೂ ಮಾತನಾಡಿಲ್ಲ. ಹೀಗಾಗಿ ಕಾನೂನು ಹೋರಾಟ ಮುಂದುವರಿಸುತ್ತೇನೆ ಎಂದು ಚಲನಚಿತ್ರ ನಿರ್ಮಾಪಕ ಉಮಾಪತಿ ಶ್ರೀನಿವಾಸ ಗೌಡ ಹೇಳಿದ್ದಾರೆ.

ಸಮಾಚಾರ ಸಣ್ಣದಲ್ಲ

ಎಲ್.ಕೆ.ಅತೀಕ್ ಮುಖ್ಯಮಂತ್ರಿ ಎಸಿಎಸ್

ಬೆಂಗಳೂರು: ಮುಖ್ಯಮಂತ್ರಿಗಳ ಅಪರ ಮುಖ್ಯ ಕಾರ್ಯದರ್ಶಿಯಾಗಿ ಹಿರಿಯ ಐಎಎಸ್ ಅಧಿಕಾರಿ ಎಲ್.ಕೆ.ಅತೀಕ್ ಅವರನ್ನು ನೇಮಕ ಮಾಡಲಾಗಿದೆ.

ಮುಖ್ಯಮಂತ್ರಿಯವರ ಅಪರ ಮುಖ್ಯ ಕಾರ್ಯದರ್ಶಿಯಾಗಿದ್ದ ರಜನೀಶ್ ಗೋಯಲ್ ಅವರನ್ನು ಸರಕಾರದ ಮುಖ್ಯ ಕಾರ್ಯದರ್ಶಿಯಾಗಿ ನೇಮಕ ಮಾಡಿದ್ದು, ಅವರು ನ. 30ರಂದು ಅಧಿಕಾರ ಸ್ವೀಕರಿಸಲಿದ್ದಾರೆ. ಈ ಹಿನ್ನೆಲೆಯಲ್ಲಿ ಹಣಕಾಸು ಇಲಾಖೆ ಅಪರ ಮುಖ್ಯ ಕಾರ್ಯದರ್ಶಿಯಾಗಿರುವ ಅತೀಕ್ ಅವರು ಮುಖ್ಯಮಂತ್ರಿಯವರ ಅಪರ ಮುಖ್ಯ ಕಾರ್ಯದರ್ಶಿಯಾಗಿ ನೇಮಿಸಿದ್ದು, ಎರಡೂ ಜವಾಬ್ದಾರಿಗಳಲ್ಲಿ ಅವರು ಮುಂದುವರಿಯಲಿದ್ದಾರೆ.

ಸಭೆ/ಸಮಾರಂಭ

ಸಂವಿಧಾನ ಹಬ್ಬ
ಮುಖ್ಯ ಅತಿಥಿ: ಬೆಂಗಳೂರು ವಿವಿ ಕುಲಪತಿ ಪ್ರೊ. ಜಯಕರ್ ಎಸ್ ಎಂ, ಶಾಸಕ ಶ್ರೀನಿವಾಸಯ್ಯ, ಬಾಬಾ ಸಾಹೇಬ್ ಅಂಬೇಡ್ಕರ್ ಅಧ್ಯಯನ ಮತ್ತು ಸಂಶೋಧನಾ ಕೇಂದ್ರ ನಿರ್ದೇಶಕ ಡಾ. ಸಿ.ಬಿ ಹೊನ್ನು ಸಿದ್ಧಾರ್ಥ
ಸ್ಥಳ: ಬಾಬಾ ಸಾಹೇಬ್ ಡಾ.ಬಿ.ಆರ್ ಅಂ.ಬೇಡ್ಕರ್ ಅಧ್ಯಯನ ಮತ್ತು ಸಂಶೋಧನಾ ಕೇಂದ್ರ, ಜ್ಞಾನಭಾರತಿ
ಸಮಯ: ಬೆಳಗ್ಗೆ 9.00 ಗಂಟೆ

17ನೇ ಅಂತಾರಾಷ್ಟ್ರೀಯ ಸಮ್ಮೇಳನ ಹಾಗೂ ಪ್ರದರ್ಶನ ಉದ್ಘಾಟನೆ
ಮುಖ್ಯ ಅತಿಥಿ: ಸಿಎಂ ಸಿದ್ದರಾಮಯ್ಯ, ಕೇಂದ್ರ ಸಚಿವೆ ನಿರ್ಮಲಾ ಸೀತಾರಾಮನ್, ಕೇಂದ್ರ ಸಚಿವ ರಾಜೀವ್ ಎಂ.ಚಂದ್ರಶೇಖರ್, ಡಿಸಿಎಂ ಡಿ.ಕೆ.ಶಿವಕುಮಾರ್
ಸ್ಥಳ: ತ್ರಿಪುರವಾಸಿನಿ, ಅರಮನೆ ಮೈದಾನ, ಬಳ್ಳಾರಿ ರಸ್ತೆ, ಬೆಂಗಳೂರು.
ಸಮಯ: ಬೆಳಗ್ಗೆ 10.00 ಗಂಟೆ

ಭ್ರೂಣಪತ್ತೆ, ಹತ್ಯೆ ಪ್ರಕರಣ: ಪೋಷಕರ ವಿಚಾರಣೆಗೆ ಸಿದ್ಧತೆ?

ಭ್ರೂಣಹತ್ಯೆ ಮಾಡಿಸಿದ್ದ ಪೋಷಕರ ವಿರುದ್ಧವೂ ಕ್ರಮಕ್ಕೆ ಮುಂದಾದ ಪೊಲೀಸರು

ಬೆಂಗಳೂರು: ಇತ್ತೀಚೆಗೆ ಬೆಳಕಿಗೆ ಬಂದ ಹೆಣ್ಣು ಭ್ರೂಣ ಹತ್ಯೆ ಪ್ರಕರಣಕ್ಕೆ ಸಂಬಂಧಿಸಿದಂತೆ ವೈದ್ಯರು ಸೇರಿ ಒಂಬತ್ತು ಆರೋಪಿಗಳನ್ನು ಬಂಧಿಸಿದ್ದ ಪೊಲೀಸರು ಇದೀಗ ಭ್ರೂಣಹತ್ಯೆ ಮಾಡಿಸಿದ ಪೋಷಕರ ವಿರುದ್ಧವೂ ಕ್ರಮ ಕೈಗೊಳ್ಳಲು ಮುಂದಾಗಿದ್ದಾರೆ.

ಭ್ರೂಣ ಲಿಂಗ ಪತ್ತೆ ಮತ್ತು ಭ್ರೂಣ ಹತ್ಯೆ ಕಾನೂನು ಪ್ರಕಾರ ಅಪರಾಧ. ಭ್ರೂಣ ಪತ್ತೆ ಮಾಡಿದ ಮತ್ತು ಅದರ ಹತ್ಯೆ ಮಾಡಿದವರೊಂದಿಗೆ ಮಾಡಿಸಿಕೊಂಡವರು ಕೂಡ ಅಪರಾಧಿಗಳಾಗುತ್ತಾರೆ. ಅದರಲ್ಲೂ ಹೆಣ್ಣು ಭ್ರೂಣ ಎಂದು ತಿಳಿದು, ಅವುಗಳನ್ನು ಹತ್ಯೆ(ಗರ್ಭಪಾತ) ಮಾಡಿಸಿದ ಪೋಷಕರಿಗೂ ಭ್ರೂಣ ಹತ್ಯೆ ಮಾಡಿದವರಿಗೆ ಆಗುವಷ್ಟೇ ಶಿಕ್ಷೆಯಿದೆ.

ಈ ಹಿನ್ನೆಲೆಯಲ್ಲಿ ಭ್ರೂಣ ಹತ್ಯೆ ಮಾಡಿಸಿದ ಪೋಷಕರ ವಿರುದ್ಧವೂ ಕ್ರಮ ಕೈಗೊಳ್ಳಲು ಯೋಚಿಸುತ್ತಿರುವ ಪೊಲೀಸರು, ಪೋಷಕರಿಗೆ ನೋಟಿಸ್ ಜಾರಿಗೊಳಿಸಲು ಮುಂದಾಗಿದ್ದಾರೆ. ಬಂಧಿತ ಆರೋಪಿಗಳ ಬಳಿ ಸಿಕ್ಕಿದ ದಾಖಲೆಗಳಲ್ಲಿರುವ ಮಾಹಿತಿ ಆಧರಿಸಿ ಪೋಷಕರಿಗೆ ನೋಟಿಸ್ ಜಾರಿ ಮಾಡಲಾಗುವುದು. ಕಾನೂನು ಸಲಹೆ ಪಡೆದು ಗರ್ಭಪಾತ ಮಾಡಿಸಿಕೊಂಡ ಪೋಷಕರನ್ನು ಸಾಕ್ಷಿದಾರರನ್ನಾಗಿ ಮಾಡಬಹುದು ಅಥವಾ ಅವರ ವಿರುದ್ಧವೂ ಕಾನೂನು ಕ್ರಮಕೈಗೊಳ್ಳಲಾಗುತ್ತದೆ ಎಂದು ಹಿರಿಯ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಭ್ರೂಣ ಪತ್ತೆ ಮಾಡಿ ಹೆಣ್ಣು ಭ್ರೂಣ ಹತ್ಯೆ ಮಾಡುತ್ತಿದ್ದ ಪ್ರಕರಣ ಸಂಬಂಧ ಕಳೆದ ಅಕ್ಟೋಬರ್‌ನಲ್ಲಿ ನಾಲ್ವರನ್ನು ಬಂಧಿಸಿದ್ದ ಪೊಲೀಸರು ಅವರು ನೀಡಿದ ಮಾಹಿತಿ ಆಧರಿಸಿ ವೈದ್ಯರು ಸೇರಿ ಇನ್ನೂ ಐವರನ್ನು ಬಂಧಿಸಿದ್ದರು. ಪ್ರಕರಣದ ಕಿಂಗ್‌ಪಿನ್‌ಗಳಾದ ಮೈಸೂರಿನ ಆಯುರ್ವೇದ ವೈದ್ಯ ಚಂದನ್ ಬಲ್ಲಾಳ್, ಮಕ್ಕಳ ತಜ್ಞ ತುಳಸಿರಾಮ್ ಬಂಧಿತರಲ್ಲಿ ಸೇರಿದ್ದಾರೆ. ಆರೋಪಿಗಳಿಂದ ಹೆಣ್ಣು ಭ್ರೂಣ ಪತ್ತೆ ಮಾಡಿಸಿ, ಗರ್ಭಪಾತ ಮಾಡಿಸಿಕೊಂಡ ಪೋಷಕರ ಮಾಹಿತಿ ಸಂಗ್ರಹಿಸಲಾಗಿದೆ. ಚಂದನ್ ಬಲ್ಲಾಳ್ ಆಸ್ಪತ್ರೆ ಮೇಲೆ ದಾಳಿ ನಡೆಸಿ ವಶಕ್ಕೆ ಪಡೆದ ರಿಜಿಸ್ಟರ್ ಪುಸ್ತಕ, ಕಂಪ್ಯೂಟರ್ ಹಾಗೂ ಇತರ ದಾಖಲಾತಿಗಳಲ್ಲ 100ಕ್ಕೂ ಅಧಿಕ ಪೋಷಕರ ಮಾಹಿತಿ ದೊರಕಿದೆ. ಇನ್ನುಳಿದ ಪೋಷಕರ ಮಾಹಿತಿ ಸಂಗ್ರಹ ಕಷ್ಟವಾಗುತ್ತದೆ. ಆರೋಪಿಗಳು ವಿಚಾರಣೆ ವೇಳೆ ಯಾವೆಲ್ಲ ಜಿಲ್ಲೆಯ ಗರ್ಭಿಣಿಯರಿಗೆ ಗರ್ಭಪಾತ ಮಾಡಿಸಲಾಗಿದೆ ಎಂಬ ಮಾಹಿತಿ ನೀಡಿದ್ದಾರೆ. ಈ ಆಧಾರದ ಮೇಲೆ ಸದ್ಯದಲ್ಲೇ ಕೆಲ ಪೋಷಕರಿಗೆ ನೋಟಸ್ ನೀಡಲಾಗುತ್ತದೆ ಎಂದು ಅಧಿಕಾರಿಗಳು ಹೇಳಿದ್ದಾರೆ.

ಆಸ್ಪತ್ರೆ ನೋಂದಣಿಯಾಗಿರಲಿಲ್ಲ

ಮೈಸೂರಿನ ಉದಯಗಿರಿಯಲ್ಲಿದ್ದ ಲತಾ ಆಸ್ಪತ್ರೆಯನ್ನು ಚಂದನ್ ಬಲ್ಲಾಳ್‌ಗೆ ಆರೋಪಿ ವೈದ್ಯ ತುಳಸಿರಾಮ್ ಮಾರಾಟ ಮಾಡಿದ್ದು, ಚಂದನ್ ಬಲ್ಲಾಳ್ ಅದಕ್ಕೆ ಮಾತಾ ಆಸ್ಪತ್ರೆ ಎಂಬ ಹೆಸರಿಟ್ಟು ನಡೆಸುತ್ತಿದ್ದ. ಆದರೆ, ಅದನ್ನು ಕೆಪಿಎಂಇ(ಕರ್ನಾಟಕ ಪ್ರೈವೇಟ್ ಮೆಡಿಕಲ್ ಎಸ್ಟಾಬ್ಲಿಷನ್‌ಮೆಂಟ್) ಕಾಯಿದೆಯಡಿ ನೊಂದಣಿ ಮಾಡಿಸಿರಲಿಲ್ಲ. ಅಲ್ಲದೆ, ಐದು ತಿಂಗಳಿಂದ ಈ ಆಸ್ಪತ್ರೆ ಕಾರ್ಯ ನಿರ್ವಹಿಸುತ್ತಿಲ್ಲ ಎಂಬುದು ತನಿಖೆಯಲ್ಲಿ ಬೆಳಕಿಗೆ ಬಂದಿದೆ. ಈದರೆ, ಮಾತಾ ಆಸ್ಪತ್ರೆ ಸ್ಥಗಿತಗೊಳಿಸಿದ್ದ ಚಂದನ್ ಬಲ್ಲಾಳ್, ಮೈಸೂರಿನ ರಾಜ್ ಕುಮಾರ್ ರಸ್ತೆಯಲ್ಲಿ ಮತ್ತೊಂದು ಆಯುರ್ವೇದಿಕ್ ಆಸ್ಪತ್ರೆ ತೆರೆದು ಅಕ್ರಮ ದಂಧೆ ಮುಂದುವರಿಸಿದ್ದ ಎಂದು ಪೊಲೀಸರ ವಿಚಾರಣೆ ವೇಳೆ ಗೊತ್ತಾಗಿದೆ.

ಬೆಂಗಳೂರಿನ ಸಿರ್ಸಿ ವೃತ್ತದ ಬಳಿ ಇರುವ ಸಿಎಆರ್ ಪೊಲೀಸ್ ಪೆರೇಡ್ ಮೈದಾನದಲ್ಲಿ ಪೊಲೀಸರಿಗೆ ಲಾಠಿ ಬೀಸುವ ಮತ್ತು ಬಳಕೆ ಮಾಡುವ ತರಬೇತಿ ನೀಡಲಾಗುತ್ತಿದ್ದು, ಸೋಮವಾರ ತರಬೇತಿ ಪಡೆಯುತ್ತಿದ್ದ ಪೊಲೀಸರು ಕ್ಯಾಮೆರಾ ಕಣ್ಣಿಗೆ ಬಿದ್ದಿದ್ದು ಹೀಗೆ.
ಚಿತ್ರ: ಸುಧಾಕರ್ ದೇವರಾಜ್

ಶಬರಿಮಲೆಗೆ ವೋಲ್ವೋ ಬಸ್ ವ್ಯವಸ್ಥೆ

ಬೆಂಗಳೂರು: ಕೇರಳದ ಪ್ರಸಿದ್ಧ ಯಾತ್ರಾ ಸ್ಥಳ ಶಬರಿಮಲೆಗೆ ಅಯ್ಯಪ್ಪನ ದರ್ಶನಕ್ಕಾಗಿ ತೆರಳುವವರಿಗಾಗಿ ಕೆಎಸ್ ಆರ್‌ಟಿಸಿಯು ಬೆಂಗಳೂರಿನಿಂದ ನೇರ ಬಸ್ ವ್ಯವಸ್ಥೆ ಮಾಡಿದೆ.

ಪ್ರಯಾಣಿಕರ ಅನುಕೂಲಕ್ಕಾಗಿ ಬೆಂಗಳೂರಿನಿಂದ ಶಬರಿಮಲೆಗೆ ವೋಲ್ವೋ ಬಸ್ ಕಾರ್ಯಚರಣೆ ನಡೆಸಲಿದ್ದು, ಡಿಸೆಂಬರ್ 1ರಿಂದ ಶಬರಿಮಲೆಗೆ ನೀಲಕ್ಕಲ್ ಮಾರ್ಗವಾಗಿ ವೋಲ್ವೋ ಬಸ್ ಸಂಚರಿಸಲಿದೆ. ವೋಲ್ವೊ ಬಸ್‌ನ ಟಿಕೆಟ್ ದರ, ಮಾರ್ಗ, ಸಂಚಾರದ ವೇಳಾಪಟ್ಟಿಯ ಕುರಿತು ಕೆಎಸ್‌ಆರ್‌ಟಿಸಿ ಮಾಹಿತಿ ನೀಡಿದೆ.

ವಯಸ್ಕರಿಗೆ ಬೆಂಗಳೂರಿಂದ ಶಬರಿಮಲೆಗೆ 1600 ರುಪಾಯಿ ದರ ನಿಗದಿ ಮಾಡಲಾಗಿದೆ. ಶಾಂತಿನಗರ ಬಸ್ ನಿಲ್ದಾಣದಿಂದ ಮಧ್ಯಾಹ್ನ 1.50 ಕ್ಕೆ ಹೊರಡಲಿರುವ ವೋಲ್ವೋ ಬಸ್ ಮರುದಿನ ಬೆಳಿಗ್ಗೆ 6.45 ಕ್ಕೆ ಪಂಪಾ ತಲುಪಲಿದೆ. ಅಂದು ಸಂಜೆ ಮತ್ತೆ ಪಂಪಾದಿಂದ ಹೊರಟು ಮರುದಿನ ಬೆಳಗ್ಗೆ 10 ಗಂಟೆಗೆ ಬೆಂಗಳೂರು ತಲುಪಲಿದೆ.

ಮತ್ತೊಂದು ರಾಜಹಂಸ ಬಸ್ (ನಾನ್ ಎಸಿ) ಕೂಡ ಶಬರಿಮಲೆಗೆ ಸಂಚರಿಸಲಿದೆ. ರಾಜಹಂಸ ಬಸ್ ಶಾಂತಿನಗರ ಬಸ್ ನಿಲ್ದಾಣದಿಂದ ಮಧ್ಯಾಹ್ನ 1 ಗಂಟೆಗೆ ಹೊರಟು ಮರುದಿನ ಬೆಳಗ್ಗೆ 8.15ಕ್ಕೆ ಪಂಪಾ ತಲುಪಲಿದೆ. ಆ ದಿನ ಸಂಜೆ 5 ಗಂಟೆಗೆ ಪಂಪಾದಿಂದ ಹೊರಟು ಮರುದಿನ ಮಧ್ಯಾಹ್ನ 12 ಗಂಟೆಗೆ ಬೆಂಗಳೂರು ತಲುಪಲಿದೆ. ರಾಜಹಂಸದಲ್ಲಿ ಬೆಂಗಳೂರಿನಿಂದ ಶಬರಿಮಲೆಗೆ ಪ್ರತಿ ಟಿಕೆಟ್ ಬೆಲೆ 940 ರು. ಆಗಿದೆ ಎಂದು ಪ್ರಕಟಣೆಯಲ್ಲಿ ತಿಳಿಸಿದ್ದು, ಕೆಎಸ್‌ಆರ್‌ಟಿಸಿಯ ಅಧಿಕೃತ ವೆಬ್‌ಸೈಟ್‌ನಲ್ಲಿ ಟಿಕೆಟ್ ಬುಕ್ಕಿಂಗ್ ಮಾಡಬಹುದಾಗಿದೆ.

ಗುತ್ತಿಗೆದಾರ ಅಂಬಿಕಾಪತಿ ನಿಧನ

ಬೆಂಗಳೂರು: ಇತ್ತೀಚೆಗೆ ಆದಾಯ ತೆರಿಗೆ ಇಲಾಖೆ ದಾಳಿಗೊಳಗಾಗಿದ್ದ ರಾಜ್ಯ ಗುತ್ತಿಗೆದಾರರ ಸಂಘದ ಉಪಾಧ್ಯಕ್ಷ ಆರ್. ಅಂಬಿಕಾಪತಿ ಸೋಮವಾರ ಸಂಜೆ ನಿಧನರಾಗಿದ್ದಾರೆ.

ಬಿಬಿಎಂಪಿ ಗುತ್ತಿಗೆದಾರರ ಸಂಘದ ಅಧ್ಯಕ್ಷರೂ ಆಗಿರುವ ಹಿರಿಯ ಗುತ್ತಿಗೆದಾರ ಅಂಬಿಕಾಪತಿ ಸೋಮವಾರ ಸಂಜೆ ಹೃದಾಯಾಘಾತದಿಂದ ನಿಧನರಾದಿದ್ದಾರೆ. ಸಂಜೆ ಹೃದಯಾಘಾತಕ್ಕೆ ಒಳಗಾಗಿದ್ದ ಅವರನ್ನು ಕೂಡಲೇ ಹೆಬ್ಬಾಳದ ಖಾಸಗಿ ಆಸ್ಪತ್ರೆಗೆ ದಾಖಲಿಸಲಾಯಿತಾದರೂ ಪ್ರಯೋಜನವಾಗಲಿಲ್ಲ ಎಂದು ಗುತ್ತಿಗೆದಾರರ ಸಂಜದ ಮೂಲಗಳು ತಿಳಿಸಿವೆ.

ಅ. 13ರಂದು ಆದಾಯ ತೆರಿಗೆ ಇಲಾಖೆ ಅಧಿಕಾರಿಗಳು ಅಂಬಿಕಾಪತಿ ಮತ್ತು ಅವರ ಪತ್ನಿ, ಮಾಜಿ ಕಾರ್ಪೊರೇಟರ್ ಅಶ್ವತ್ಥಮ್ಮ ಅವರ ಭಾವಮೈದುನನ ಫ್ಲ್ಯಾಟ್ ಮೇಲೆ ದಾಳಿ ನಡೆಸಿ 42 ಕೋಟಿ ನಗದು ವಶಪಡಿಸಿಕೊಂಡಿದ್ದರು. ಪ್ರಕರಣಕ್ಕೆ ಸಂಬಂಧಿಸಿದಂತೆ ವಿಚಾರಣೆಗೆ ಹಾಜರಾಗಲು ಅಂಬಿಕಾಪತಿ ಅವರಿಗೆ ನೋಟಿಸ್ ಜಾರಿ ಮಾಡಿದ್ದರು. ಅದರಂತೆ ಅವರು ವಿಚಾರಣೆಗೆ ಹಾಜರಾಗಿದ್ದರು.

ಈ ಮಧ್ಯೆ ಅಂಬಿಕಾಪತಿ ಶಾಸಕ ಎನ್. ಮುನಿರತ್ನ ವಿರುದ್ಧ ಕಮಿಷನ್ ಆರೋಪ ಮಾಡಿದ್ದರು. ಈ ಹಿನ್ನೆಲೆಯಲ್ಲಿ ಅವರ ವಿರುದ್ಧ ಮುನಿರತ್ನ ಮಾನನಷ್ಟ ಮೊಕದ್ದಮೆ ದಾಖಲಿಸಿ ದ್ದರು. ಪ್ರಕರಣ ಸಂಬಂಧ ವೈಯಾ ಲಿಕಾವಲ್ ಪೊಲೀಸರು ಅಂಬಿಕಾ ಪತಿಯನ್ನು ಬಂಧಿಸಿ ಬಳಿಕ ಜಾಮೀ ನಿನ ಮೇಲೆ ಬಿಡುಗಡೆ ಮಾಡಿದ್ದರು. ಎರಡು ವರ್ಷಗಳ ಹಿಂದೆ ಅಂಬಿಕಾಪತಿ ಅವರಿಗೆ ಕಿಡ್ನಿ ಬದಲಾವಣೆ ಮಾಡಿದ್ದು, ಇತ್ತೀಚೆಗೆ ಪೈಲ್ಸ್ ಸಮಸ್ಯೆಯಿಂದ ಬಳಲುತ್ತಿದ್ದ ಅವರಿಗೆ ಕಳೆದ ವಾರವಷ್ಟೇ ಲೇಸರ್ ಚಿಕಿತ್ಸೆ ನೀಡಲಾಗಿತ್ತು. ಆರೋಗ್ಯ ಸಮಸ್ಯೆ ಮಧ್ಯೆ ಆದಾಯ ತೆರಿಗೆ ದಾಳಿಯಿಂದ ಅವರು ಮಾನಸಿಕ ಆಘಾತಕ್ಕೆ ಒಳಗಾಗಿದ್ದರು ಎಂದು ಹೇಳಲಾಗಿದೆ.

ಅಂಬಿಕಾಪತಿ ನಿಧನಕ್ಕೆ ರಾಜ್ಯ ಗುತ್ತಿಗೆದಾರರ ಸಂಘದ ಅಧ್ಯಕ್ಷ ಕೆಂಪಣ್ಣ ಸಂತಾಪ ಸೂಚಿಸಿದ್ದಾರೆ.

ಟಾಟಾ ಕ್ಯಾಪಿಟಲ್ ಫೈನಾನ್ಷಿಯಲ್ ಸರ್ವಿಸಸ್ ಲಿಮಿಟೆಡ್
TATA
ನೋಂದಾಯಿತ ಕಛೇರಿ : 11ನೇ ಮಹಡಿ, ಟವರ್ ಎ, ಪೆನಿನ್ಸುಲಾ ಬಿಸಿನೆಸ್ ಪಾರ್ಕ್, ಗಣಪತರಾವ್ ಕದಂ ಮಾರ್ಗ, ಲೋಯರ್ ಪರೇಲ್, ಮುಂಬೈ -400 013
ಬೆಂಗಳೂರು ಶಾಖೆ : ನಂ.82/1, ನೆಲಮಹಡಿ, ಕೃಷ್ಣ ಟವರ್ಸ್, ರಿಚ್ಮಂಡ್ ರಸ್ತೆ, ಬೆಂಗಳೂರು-560 025

ಸ್ಥಿರಾಸ್ತಿಗಳ ಮಾರಾಟ ಸೂಚನೆ (2002 ರ ಭದ್ರತಾ ಹಿತಾಸಕ್ತಿ (ಜಾರಿ) ನಿಯಮಗಳ ಅಧಿನಿಯಮ 9(1) ರಡಿ)

ಆರ್ಥಿಕ ಭದ್ರತೆ ಮತ್ತು ಪುನರ್ನಿರ್ಮಾಣದ ಅಡಿಯಲ್ಲಿ ಸ್ಥಿರ ಆಸ್ತಿಗಳ ಮಾರಾಟಕ್ಕಾಗಿ ಇ-ಹರಾಜು ಮಾರಾಟದ ಸೂಚನೆ ಭದ್ರತೆ ಆಸಕ್ತಿ (ಜಾರಿ) ನಿಯಮಗಳು, 2002 ರ ನಿಯಮ 8(6) ಡಿ/ತಿ ರೂಲ್ 9(1) ರ ನಿಬಂಧನೆಯೊಂದಿಗೆ 2002 ರ ಸ್ವತ್ತುಗಳು ಮತ್ತು ಭದ್ರತಾ ಹಿತಾಸಕ್ತಿ ಜಾರಿ.

ಸಾಲದ ಖಾತೆ ಸಂಖ್ಯೆ: 6865902: ಮೇ. ಗಿರಿಜಾ ಎಂಟರ್‌ಪ್ರೈಸಸ್

ಈ ಮೂಲಕ ಸಾಮಾನ್ಯವಾಗಿ ಸಾರ್ವಜನಿಕರಿಗೆ ಮತ್ತು ನಿರ್ದಿಷ್ಟವಾಗಿ ಕೆಳಗಿನ ಸಾಲಗಾರ/ಸಹ-ಸಾಲಗಾರರಿಗೆ ಈ ಕೆಳಗೆ ವಿವರಿಸಿರುವ ಸ್ಥಿರಾಸ್ತಿಯನ್ನು ಟಾಟಾ ಕ್ಯಾಪಿಟಲ್ ಫೈನಾನ್ಷಿಯಲ್ ಸರ್ವಿಸಸ್ ಲಿಮಿಟೆಡ್‌ಗೆ **(ಸೆಕ್ಯೂರ್ಡ್‌ಕ್ರೆಡಿಟರ್/ಟಿಸಿಎಫ್‌ಎಸ್‌ಎಲ್)** ಅಡಮಾನವಾಗಿ ನೀಡಲಾಗಿದೆ ಎಂದು ಸೂಚನೆ ನೀಡಲಾಗಿದೆ. ಟಾಟಾ ಕ್ಯಾಪಿಟಲ್ ಫೈನಾನ್ಷಿಯಲ್ ಸರ್ವಿಸಸ್ ಲಿ. (ಸೆಕ್ಯೂರ್ಡ್ ಕ್ರೆಡಿಟರ್), **ಡಿಸೆಂಬರ್ 21, 2023 ರಂದು "ಆಸ್‌ಈಸ್‌ವೇರ್ ಈಸ್ ಬೇಸ್" ಮತ್ತು "ಆಸ್ ಇದು ಏನು ಮತ್ತು ಏನು ಇದೆಯೋ ಅದು &ಆಧಾರವಿಲ್ಲದೆ".**

ಸುರಕ್ಷಿತ ಸಾಲವನ್ನು ಮರುಪಡೆಯಲು ಸುರಕ್ಷಿತ ಆಸ್ತಿಯ ಮಾರಾಟವನ್ನು ಮಾಡಬೇಕಾಗಿದ್ದರೂ ಮತ್ತು ಬಾಕಿ ಇತ್ತು ಒಟ್ಟಿದು ಮೊತ್ತ **ರೂ. 2,45,54,008.59ಕ (ರೂಪಾಯಿಗಳು ಎರಡು ಕೋಟಿ ನಲವತ್ತೈದು ಲಕ್ಷಗಳು ಐವತ್ನಾಲ್ಕು ಸಾವಿರದ ಎಂಟು ಮತ್ತು ಐವತ್ತೊಂಬತ್ತು ಪೈಸಾ ಮಾತ್ರ/-) 13ನೇ ಮೇ, 2022 ರಂತೆ ಸಾಲಗಾರರು ಮತ್ತು ಸಹ-ಸಾಲಗಾರರು/ಖಾತರಿದಾರರಿಂದ,** ಅಂದರೆ (1) **ಗಿರಿಜಾ ಎಂಟರ್‌ಪ್ರೈಸಸ್** ಪ್ರತಿನಿಧಿಯಾಗಿ ಇದರ ಪಾಲುದಾರ **ಶ್ರೀ. ರಾಮಕೃಷ್ಣ ಶ್ರೀನಿವಾಸ,** ನಂ.8, ಅಪ್ಪಜಪ್ಪಗ್ರಹಾರ, ಚಾಮರಾಜಪೇಟೆ, ಬೆಂಗಳೂರು-560018 (ಕೆಎ); (2) **ಗಿರಿಜಾ ಎಂಟರ್‌ಪ್ರೈಸಸ್**, ಇದರ ಪಾಲುದಾರ ಶ್ರೀಮತಿ ಪ್ರತಿನಿಧಿ. ಶ್ರೀನಿವಾಸ ಗಿರಿಜಾ, ನಂ.8, ಅಪ್ಪಜಪ್ಪ ಅಗ್ರಹಾರ, ಚಾಮರಾಜಪೇಟೆ, ಬೆಂಗಳೂರು-560018 (ಕೆಎ); (3) **ಗಿರಿಜಾ ಎಂಟರ್‌ಪ್ರೈಸಸ್**, ಅದರ ಪಾಲುದಾರರಿಂದ ಪ್ರತಿನಿಧಿ ಶ್ರೀ. ಶಶಾಂಕ್ ಶ್ರೀನಿವಾಸ್, ನಂ.8, ಅಪ್ಪಾಜಪ್ಪ ಅಗ್ರಹಾರ, ಚಾಮರಾಜಪೇಟೆ, ಬೆಂಗಳೂರು-560018 (ಕೆಎ); (4) **ಶ್ರೀ. ರಾಮಕೃಷ್ಣ ಶ್ರೀನಿವಾಸ, ಬಿನ್/ ರಾಮಕೃಷ್ಣ**, ನಂ.8, ಅಪ್ಪಜಪ್ಪಗ್ರಹಾರ, ಚಾಮರಾಜಪೇಟೆ, ಬೆಂಗಳೂರು-560018; ಮತ್ತು ವಿಳಾಸ:- ನಂ.10, ಚಾಮರಾಜಪೇಟೆ ಸೈಟ್ ನಂ.10 (ಹಳೆಯದು:227) ಚಾಮರಾಜಪೇಟೆಯ 1ನೇ ಕ್ರಾಸ್‌ನಲ್ಲಿದೆ, ಸಹಕಾರ ವಿಭಾಗ ನಂ.42, (ಹಳೆಯ ನಂ.41- ಡಿ), ಬೆಂಗಳೂರು-560018 (ಕೆಎ); (5) **ಶ್ರೀಮತಿ. ಶ್ರೀನಿವಾಸ ಗಿರಿಜಾ, ಕೋಂ. ಎಂ.ಆರ್. ರಾಮಕೃಷ್ಣ ಶ್ರೀನಿವಾಸ,** ನಂ.8, ಅಪ್ಪಾಜಪ್ಪ ಅಗ್ರಹಾರ, ಚಾಮರಾಜಪೇಟೆ, ಬೆಂಗಳೂರು-560018; ಮತ್ತು ವಿಳಾಸ:- ನಂ.10, ಚಾಮರಾಜಪೇಟೆ ಸೈಟ್ ನಂ.10 (ಹಳೆಯದು:227) 1ನೇ ಕ್ರಾಸ್‌ನಲ್ಲಿದೆ, ಚಾಮರಾಜಪೇಟೆ, ಸಹಕಾರ ವಿಭಾಗ ನಂ.42, (ಹಳೆಯ ನಂ.41-ಡಿ), ಬೆಂಗಳೂರು-560018 (ಕೆಎ); (6) **ಶ್ರೀ. ಶಶಾಂಕ್ ಶ್ರೀನಿವಾಸ್, ಬಿನ್/ ಶ್ರೀನಿವಾಸ್‌ರಾಮಕೃಷ್ಣಪ್ಪ,** ನಂ.8, ಅಪ್ಪಜಪ್ಪ ಅಗ್ರಹಾರ, ಚಾಮರಾಜಪೇಟೆ, ಬೆಂಗಳೂರು-560018. ಯಾವುದೇ ಮುಂದೂಡಿಕೆ/ಮಾರಾಟವನ್ನು ಸ್ಥಗಿತಗೊಳಿಸದಿದ್ದಲ್ಲಿ, ಹೇಳಿದ ಆಸ್ತಿಯನ್ನು ಇ-ಹರಾಜಿನ ಮೂಲಕ ಮಧ್ಯಾಹ್ನ 2 ಗಂಟೆಗೆ ಮಾರಾಟ ಮಾಡಲಾಗುವುದು ಎಂದು ಈ ಮೂಲಕ ಸೂಚನೆ ನೀಡಲಾಗಿದೆ. **ಡಿಸೆಂಬರ್‌ನ 21 ನೇ 2023** ರ ದಿನದಂದು ಟಿಸಿಎಫ್‌ಎಸ್‌ಎಲ್., ಅದರ ಹೊಂದಿರುವ 01ನೇ ಮತ್ತು 02ನೇ ಮಹಡಿಯಲ್ಲಿ ಶಾಖಾ ಕಚೇರಿ, 82/1, ರಿಚ್ಮಂಡ್ ರಸ್ತೆ, ಬೆಂಗಳೂರು- 560025. ಇಎಮ್‌ಡಿ ಡಿಮ್ಯಾಂಡ್ ಮತ್ತು ಡ್ರಾಫ್ಟ್‌ನೊಂದಿಗೆ ಆಸ್ತಿಯ ಖರೀದಿಗಾಗಿ ಮೊಹರು ಮಾಡಿದ ಇ-ಹರಾಜನ್ನು ಟಾಟಾ ಕ್ಯಾಪಿಟಲ್‌ಫೈನಾನ್ಷಿಯಲ್ ಸರ್ವಿಸ್ ಲಿಮಿಟೆಡ್‌ನ ಅಧಿಕೃತ ಅಧಿಕಾರಿಯು ಸಂಜೆ 5.00 ರವರೆಗೆ ಸ್ವೀಕರಿಸಬೇಕು. ಡಿಸೆಂಬರ್ 20ರ 2023 ರಂದು.

ಸುರಕ್ಷಿತ ಆಸ್ತಿಯ ವಿವರಣೆ	ಸ್ವಾಧೀನದ ಪ್ರಕಾರ ರಚನಾತ್ಮಕ/ಭೌತಿಕ	ಮೀಸಲು ಬೆಲೆ(ರೂ)	ಅರ್ನೆಸ್ಟ್ ಮನಿ ಇಎಂಡಿ (ರೂ.)
ವಸತಿ ಆಸ್ತಿ ನಂ.10 (ಹಳೆಯ ಸಂಖ್ಯೆ.227) ಮೊದಲ ಕ್ರಾಸ್‌ನಲ್ಲಿದೆ, ಚಾಮರಾಜಪೇಟೆ, ಬೆಂಗಳೂರು ಕಾರ್ಪೊರೇಷನ್ ವಿಭಾಗ ನಂ.42, (ಹಳೆಯ ಸಂ.41-ಡಿ), ಪೂರ್ವದಿಂದ ಪಶ್ಚಿಮಕ್ಕೆ 64 ಅಡಿ ಮತ್ತು 8 ಇಂಚು ಅಳತೆ ಅಥವಾ 19.65 ಮೀಟರ್ ಮತ್ತು ಉತ್ತರದಿಂದ ದಕ್ಷಿಣಕ್ಕೆ 41 ಅಡಿ ಮತ್ತು 6 ಇಂಚುಗಳು ಅಥವಾ 12.75 ಮೀಟರ್, ಎಲ್ಲಾ 2683 ಚದರ ಅಡಿ ಅಥವಾ 298 ಚದರ ಮುಂಭಾಗದ ಭಾಗದಲ್ಲಿ ಕಟ್ಟಡವನ್ನು ಒಳಗೊಂಡಿರುವ ಅಂಗಳಗಳು ಮೂರು ಚೌಕಗಳ ಸುತ್ತಲೂ ಅಳೆಯುವುದು ಮತ್ತು ಇದರ ಮೇಲೆ ಸೀಮಿತವಾಗಿದೆ: (ಸೇಲ್ ಡೀಡ್ ನಂ.177/1999-2000 ರಲ್ಲಿ ಹೆಚ್ಚು ಸಂಪೂರ್ಣವಾಗಿ ವಿವರಿಸಲಾಗಿದೆ ಆಣ.15/04/1999) ಪೂರ್ವದಿಂದ : ಅಡ್ಡ ರಸ್ತೆ, ಪಶ್ಚಿಮ ಇವರಿಂದ : ಆಸ್ತಿ ಬೇರಿಂಗ್ ನಂ.242, ಉತ್ತರದಿಂದ: ಕನ್ಸರ್ವೆನ್ಸಿ, ದಕ್ಷಿಣ ಇವರಿಂದ: ಆಸ್ತಿ ಸಂ.243 ಆಸ್ತಿಯ ವಿವರಣೆ: ಸ್ತಂಭ: ಮೂರು ಚೌಕಗಳು, ಛಾವಣಿ: ಖ.ಅ.ಅ., ನೆಲಹಾಸು: ಕೆಂಪು ಆಕ್ಸೈಡ್, ಗೋಡೆಗಳು : ಗಾರೆಯೊಂದಿಗೆ ಮಣ್ಣು, ಬಾಗಿಲುಗಳು ಮತ್ತು ಕಿಟಕಿಗಳು: ಎಲ್ಲಾಮರದ ವಿಧಗಳು, ಕಟ್ಟಡದ ವಯಸ್ಸು: 33 ವರ್ಷಗಳು, ಸೌಕರ್ಯಗಳು: ಸಾಮಾನ್ಯ ಬೆಳಕು, ವಿದ್ಯುತ್, ನೀರು ಮತ್ತು ಒಳಚರಂಡಿ ಸಂಪರ್ಕಗಳು ಕಾಂಪೌಂಡ್ ಗೋಡೆಗಳು, ಹಣ್ಣು ಬೇರಿಂಗ್ ಮರಗಳು ಮತ್ತು ಗೋಡೆ ಇಲ್ಲ	ಭೌತಿಕವಾಗಿ	ರೂ. 4,40,00,000/- (ನಾಲ್ಕು ರೂಪಾಯಿ ಕೋಟಿ ನಲವತ್ತು ಲಕ್ಷ(ಗಳು) ಮಾತ್ರ	ರೂ. 44,00,000/- (ರೂಪಾಯಿಗಳು ನಲವತ್ತು ನಾಲ್ಕು ಲಕ್ಷ(ಗಳು) ಮಾತ್ರ)

ಮಾರಾಟಕ್ಕೆ ಇಡಲಾಗುವ ಆಸ್ತಿಯ ವಿವರಣೆಯು ವೇಳಾಪಟ್ಟಿಯಲ್ಲಿದೆ. ಮೇಲೆ ವಿವರಿಸಿದಂತೆ ಯಾವುದಾದರೂ ಒಳಗೆ ಮತ್ತು ಸುರಕ್ಷಿತ ಆಸ್ತಿಯೊಳಗೆ ಇದ್ದಲ್ಲಿ ಚಲಿಸಬಲ್ಲ ವಸ್ತುಗಳು/ಮನೆಯ ದಾಸ್ತಾನು ಮಾರಾಟಕ್ಕೆ ಲಭ್ಯವಿರುವುದಿಲ್ಲ ಹರಾಜು ಮಾರಾಟದ ಸೂಚನೆಯಲ್ಲಿ ನಿರ್ದಿಷ್ಟವಾಗಿ ವಿವರಿಸಿದ ಹೊರತು ಸುರಕ್ಷಿತ ಆಸ್ತಿಯೊಂದಿಗೆ. ಮಾರಾಟವನ್ನು ಸಹ ನಿಲ್ಲಿಸಲಾಗುತ್ತದೆ, ಮೇಲೆ ತಿಳಿಸಿದ ಮೊತ್ತ, ಬಡ್ಡಿ ಮತ್ತು ವೆಚ್ಚಗಳನ್ನು (ಮಾರಾಟದ ವೆಚ್ಚವನ್ನು ಒಳಗೊಂಡಂತೆ) 'ಅಧಿಕೃತ ಅಧಿಕಾರಿ'ಗೆ ಟೆಂಡರ್ ಮಾಡಲಾಗುತ್ತದೆ ಅಥವಾ ಮೊತ್ತವನ್ನು ಅವರು ತೃಪ್ತಿಪಡಿಸುವಂತೆ ಪುರಾವೆ ನೀಡಲಾಗುವುದು ಅಂತಹ ಸುರಕ್ಷಿತ ಸಾಲ, ಬಡ್ಡಿ ಮತ್ತು ವೆಚ್ಚಗಳನ್ನು ಪಾವತಿಸಲಾಗಿದೆ. ಮಾರಾಟದಲ್ಲಿ, ಸಾರ್ವಜನಿಕರು ಸಾಮಾನ್ಯವಾಗಿ ತಮ್ಮ ಟೆಂಡರ್ ಅನ್ನು ವೈಯಕ್ತಿಕವಾಗಿ ಸಲ್ಲಿಸಲು ಆಹ್ವಾನಿಸಲಾಗುತ್ತದೆ. ಯಾವುದೇ ಅಧಿಕಾರಿ ಅಥವಾ ಇತರ ವ್ಯಕ್ತಿ, ಈ ಮಾರಾಟಕ್ಕೆ ಸಂಬಂಧಿಸಿದಂತೆ ನಿರ್ವಹಿಸಲು ಯಾವುದೇ ಕರ್ತವ್ಯವನ್ನು ಹೊಂದಿದ್ದರೂ, ನೇರವಾಗಿ ಅಥವಾ ಪರೋಕ್ಷವಾಗಿ ಬಿಡ್ ಮಾಡತಕ್ಕದ್ದು ಅಥವಾ ಮಾರಾಟವಾದ ಆಸ್ತಿಯಲ್ಲಿ ಯಾವುದೇ ಆಸಕ್ತಿಯನ್ನು ಪಡೆಯಲು ಪ್ರಯತ್ನಿಸಿ. ಮಾರಾಟವು ನಿಯಮಗಳು/ಷರತ್ತುಗಳಿಗೆ ಒಳಪಟ್ಟಿರುತ್ತದೆ SARFAESI ಕಾಯಿದೆ, 2002 ರ ಅಡಿಯಲ್ಲಿ ಸೂಚಿಸಲಾಗಿದೆ. ಇ-ಹರಾಜು ಪೋರ್ಟಲ್ ಮೂಲಕ ನಡೆಯುತ್ತದೆ. https://bankauctions.in ಡಿಸೆಂಬರ್ 21, 2023 ರಂದು ಮಧ್ಯಾಹ್ನ 2.00 ರಿಂದ 3.00 ರವರೆಗೆ ಪ್ರತಿಯೊಂದೂ 10 ನಿಮಿಷಗಳ ಅನಿಯಮಿತ ವಿಸ್ತರಣೆಯೊಂದಿಗೆ. ಆಸ್ತಿಯ ಖರೀದಿಗಾಗಿ ಸಲ್ಲಿಸಲಾದ ಎಲ್ಲಾ ಬಿಡ್‌ಗಳು "ಟಾಟಾ ಕ್ಯಾಪಿಟಲ್ ಫೈನಾನ್ಷಿಯಲ್‌ಗೆ ಒಲವು ತೋರುವ ಡಿಮ್ಯಾಂಡ್ ಡ್ರಾಫ್ಟ್‌ನ ಮೂಲಕ ಮೇಲೆ ತಿಳಿಸಿದ ಅರ್ನೆಸ್ಟ್ ಮನಿ ಜೊತೆಗೆ ಇರುತ್ತದೆ ಸರ್ವೀಸ್ ಲಿಮಿಟೆಡ್." ಬೆಂಗಳೂರಿನಲ್ಲಿ ಪಾವತಿಸಬೇಕು. ಆಸ್ತಿಯ ಪರಿಶೀಲನೆಯನ್ನು ಡಿಸೆಂಬರ್ 08 ನೇ ದಿನದಂದು 2023 ಬೆಳಿಗ್ಗೆ 11.00 ರಿಂದ ಸಂಜೆ 5.00 ರವರೆಗೆ. ಗಮನಿಸಿ: ಉದ್ದೇಶಿತ ಬಿಡ್ದಾರರು ಅಧಿಕೃತ ಅಧಿಕಾರಿ ಶ್ರೀ ರಾಕೇಶ್ ಡಾಮ್ಮಿ ಕೊಕ್ಕಟ್ಟು, ಇಮೇಲ್ idrakesh.kokkattu@tatacapital.com ಮತ್ತು ಮೊಬೈಲ್ ಸಂಖ್ಯೆ- +91- 6282658079 ಅನ್ನು ಸಂಪರ್ಕಿಸಬಹುದು. ಮಾರಾಟದ ವಿವರವಾದ ನಿಯಮಗಳು ಮತ್ತು ಷರತ್ತುಗಳಿಗಾಗಿ, ದಯವಿಟ್ಟು ಸುರಕ್ಷಿತ ಸಾಲಗಾರರ ವೆಬ್‌ಸೈಟ್‌ನಲ್ಲಿ ಒದಗಿಸಲಾದ ಲಿಂಕ್ ಅನ್ನು ಉಲ್ಲೇಖಿಸಿ, ಅಂದರೆ, https://bit.ly/3SXkJ9K, ಅಥವಾ ಅಧಿಕೃತ ಅಧಿಕಾರಿ ಅಥವಾ ಸೇವಾ ಪೂರೈಕೆದಾರರನ್ನು ಸಂಪರ್ಕಿಸಿ- M/.4 ಮುಖ್ಯವಿಕೆ.

ಸ್ಥಳ : ಬೆಂಗಳೂರು. ದಿನಾಂಕ : 28-11-2022 ಸಹಿ/-(ಅಧಿಕೃತ ಅಧಿಕಾರಿ) ಟಾಟಾ ಕ್ಯಾಪಿಟಲ್ ಫೈನಾನ್ಷಿಯಲ್ ಸರ್ವಿಸಸ್ ಲಿಮಿಟೆಡ್

ಉದ್ಯೋಗ ಕೊಡಿಸುವುದಾಗಿ ವಂಚಿಸಿದ್ದವ ಸೆರೆ

ಅಪರಾಧ ಸುದ್ದಿಗಳು

ಬೆಂಗಳೂರು: ಆನ್‌ಲೈನ್‌ನಲ್ಲಿ ಅರೆಕಾಲಿಕ ಉದ್ಯೋಗ ನೀಡುವುದಾಗಿ 250 ಕೋಟಿ ರು. ವಂಚನೆ ಎಸಗಿದ್ದ ನಗರದ ಪ್ಯಾಕೇಜಿಂಗ್ ಉದ್ಯಮಿಯನ್ನು ನೆರೆಯ ಕೇರಳ ರಾಜ್ಯದ ಎರ್ನಾಕುಲಂ ಪೊಲೀಸರು ಬಂಧಿಸಿದ್ದಾರೆ. ಉದ್ಯಮಿಯ ಬಂಧನದಿಂದ ಚೀನಾದ ಸೈಬರ್ ವಂಚನೆಯ ಬೃಹತ್ ಜಾಲ ಪತ್ತೆಯಾಗಿದೆ.

ಬೆಂಗಳೂರಿನ ವಿದ್ಯಾರಣ್ಯಪುರದ ಸ್ವಾಗತ್ ಲೇಔಟ್‌ನ ಮನೋಜ್ ಎಂಬಾತನನ್ನು ಬಂಧಿಸಿರುವ ಎರ್ನಾಕುಲಂ ಗ್ರಾಮಾಂತರ ಸೈಬರ್ ಪೊಲೀಸರು, ಟೆಲಿಗ್ರಾಂ ಮೂಲಕ ಅರೆಕಾಲಿಕ ಉದ್ಯೋಗ ನೀಡುವುದಾಗಿ ಲಕ್ಷಾಂತರ ಮಂದಿ ಭಾರತೀಯರನ್ನು ವಂಚಿಸುತ್ತಿರುವ ವಂಚಕ ಜಾಲವನ್ನು ಪತ್ತೆ ಮಾಡಿದ್ದಾರೆ.

ಎರ್ನಾಕುಲಂನ ಪರವೂರ್‌ನ ಇಬ್ಬರು ನಿರುದ್ಯೋಗಿಗಳಿಗೆ ಅರೆಕಾಲಿಕ ಉದ್ಯೋಗ ಕೊಡಿಸುವುದಾಗಿ ಓರ್ವನಿಂದ 7 ಲಕ್ಷ ರು. ಹಾಗೂ ಇನ್ನೊಬ್ಬನಿಂದ 11 ಲಕ್ಷ ರು. ವಂಚಿಸಿದ್ದರು. ಇವರು ಎರ್ನಾಕುಲಂನ ಗ್ರಾಮಾಂತರ ಸೈಬರ್ ಠಾಣೆಗೆ ದೂರು ನೀಡಿದ್ದರು. ಪ್ರಕರಣ ದಾಖಲಿಸಿಕೊಂಡ ಪೊಲೀಸರು ತನಿಖೆ ನಡೆಸಿದಾಗ ಬೆಂಗಳೂರಿನ ಮನೋಜ್ ಕೃತ್ಯ ಎಸಗಿರುವುದು ಪತ್ತೆಯಾಯಿತು.

ಟಾಸ್ಕ್ ನೀಡಿ ವಂಚಿಸುತ್ತಿದ್ದರು: ಬಲೆಗೆ ಬಿದ್ದ ನಿರುದ್ಯೋಗಿಗಳಿಗೆ ಟೆಲಿಗ್ರಾಂ ಮೂಲಕ ಯೂಟೂಬ್ ಟಾಸ್ಕ್‌ಗಳನ್ನು ನೀಡಲಾಗುತ್ತಿತ್ತು. 1000 ರು. ಹೂಡಿಕೆ ಮಾಡಿದರೆ 1,250 ರು. ಲಾಭ ನೀಡುವುದಾಗಿ ಮಾಹಿತಿ ನೀಡಲಾಯಿತು. ಅದೇ ರೀತಿ ಇಬ್ಬರು ಹಣ ಹೂಡಿಕೆ ಮಾಡಿದರು. ಇಬ್ಬರಿಗೂ ಹಣ ಪಾವತಿಸಲಾಯಿತು. ಆರೋಪಿಗಳು ದೊಡ್ಡ ಮೊತ್ತದ ಹಣ ಹೂಡಿಕೆ ಮಾಡಿದರೆ ಹೆಚ್ಚಿನ ಬಡ್ಡಿ ನೀಡುವುದಾಗಿ ಪುಸಲಾಯಿಸಿದರು. ಇಬ್ಬರು ಚಿನ್ನ ಅಡವಿಟ್ಟು ಹಾಗೂ ಇತರ ಕಡೆಗಳಲ್ಲಿ ಸಾಲ ಮಾಡಿ ಲಕ್ಷಗಟ್ಟಲೇ ಹಣ ತೊಡಗಿಸಿದರು. ಇವರು ವಂಚಕರು ಹೇಳಿದ ಬ್ಯಾಂಕ್ ಅಕೌಂಟ್‌ಗಳಿಗೆ ಹಣ ಹಾಕಿದ್ದರು. ದೊಡ್ಡ ಮೊತ್ತದ ಹಣ ಖಾತೆಗೆ ವರ್ಗಾವಣೆಯಾಗುತ್ತಿದ್ದಂತೆ ವಂಚಕರ ಮೊಬೈಲ್ ಸ್ವಿಚ್ ಆಫ್ ಮಾಡಿಕೊಂಡಿದ್ದರು. ಇದರಿಂದ ಭೀತಿಗೊಂಡ ಇಬ್ಬರು ಪೊಲೀಸರಿಗೆ ದೂರು ನೀಡಿದರು.

ಪ್ರಕರಣ ದಾಖಲಿಸಿ ತನಿಖೆ ಆರಂಭಿಸಿದ ಪೊಲೀಸರು ಹಣ ವರ್ಗಾವಣೆಯಾಗಿರವ ಬ್ಯಾಂಕ್ ಖಾತೆಗಳನ್ನು ಪರಿಶೀಲಿಸಿದಾಗ 40 ಚಾಲ್ತಿ ಖಾತೆಗಳಿಗೆ ವರ್ಗಾವಣೆಯಾಗಿರುವುದು ಪತ್ತೆಯಾಯಿತು. ಈ ಬ್ಯಾಂಕ್ ಖಾತೆಗಳೊಂದಿಗೆ ಮನೋಜ್ ಅವರ ಮೊಬೈಲ್ ಸಂಖ್ಯೆ ಸಂಪರ್ಕದಲ್ಲಿರುವುದು ಪತ್ತೆಯಾಯಿತು. ನಂತರ ವಂಚಕನನ್ನು ಬಂಧಿಸಿ ವಿಚಾರಣೆ ನಡೆಸಿದಾಗ ಚೀನಾದ ಸೈಬರ್ ವಂಚಕರ ದೊಡ್ಡ ಜಾಲ ಇರುವುದು ಪತ್ತೆಯಾಗಿದೆ.

ಸ್ಮಾರ್ಟ್‌ಫೋನ್ ಬಳಸುವುದನ್ನು ನಿಲ್ಲಿಸಿದ್ದ

ಮನೋಜ್ ಬೆಂಗಳೂರಿನಲ್ಲಿ ಆಹಾರ ವಿತರಣೆ ಮಾಡುವ ಪ್ಯಾಕೇಜಿಂಗ್ ಅಪ್ಲಿಕೇಷನ್ ವ್ಯವಹಾರ ನಡೆಸುತ್ತಿದ್ದ. ಈತ ಎಂಬಿಎ ಪದವೀಧರ. 2023ರ ಏಪ್ರಿಲ್‌ನಿಂದ ಸೈಬರ್ ವಂಚನೆಯಲ್ಲಿ ತೊಡಗಿಸಿಕೊಂಡಿದ್ದ. ಪೊಲೀಸರು ಬೆನ್ನತ್ತಿರುವುದನ್ನು ತಿಳಿದ ಮನೋಜ್ ಸ್ಮಾರ್ಟ್‌ಫೋನ್ ಬಳಸುವುದನ್ನು ನಿಲ್ಲಿಸಿದ್ದ. ಮೊದಲೇ ಮಾಹಿತಿ ಕಲೆ ಹಾಕಿದ್ದ ಪೊಲೀಸರು ಆತನನ್ನು ಬಲೆಗೆ ಬೀಳಿಸಿದ್ದೇವೆ ಎಂದು ಎರ್ನಾಕುಲಂ ಗ್ರಾಮಾಂತರ ಪೊಲೀಸ್ ಠಾಣೆ ಅಧಿಕಾರಿ ವೈಭವ್ ಸಕ್ಸೇನಾ ಹೇಳಿದರು.

ದಾಂಧಲೆ ನಡೆಸಿದ ರೌಡಿ ಸೇರಿ ನಾಲ್ವರ ಸೆರೆ

ಬೆಂಗಳೂರು: ಬಾರ್ ಮತ್ತು ಚಹಾ ಅಂಗಡಿಗೆ ನುಗ್ಗಿ ಲಾಂಗ್ ತೋರಿಸಿ ಬೆದರಿಸಿದ್ದಲ್ಲದೆ, ನಡುರಸ್ತೆಯಲ್ಲಿ ದಾಂಧಲೆ ನಡೆಸಿ ಸ್ಥಳೀಯರಲ್ಲಿ ಆತಂಕ ಸೃಷ್ಟಿಸಿದ ಪ್ರಕರಣ ಸಂಬಂಧ ರೌಡಿ ಸೇರಿದಂತೆ ನಾಲ್ವರನ್ನು ಆರ್.ಟಿ.ನಗರ ಪೊಲೀಸರು ಬಂಧಿಸಿದ್ದಾರೆ.

ರೌಡಿ ಬೋಡ್ಕೆ ಇಮ್ರಾನ್, ಹರ್ಷಿತ್ ಅಹಮ್ಮದ್, ಮೋಹಿತ್ ಅಲಿಯಾಸ್ ಮೋಹನ್ ಮತ್ತು ಸೈಯದ್ ಮಾಜ್ ಬಂಧಿತರು. ಆರೋಪಿಗಳ ವಿರುದ್ಧ ಕೊಲೆ ಯತ್ನ, ಬೆದರಿಕೆ, ಸುಲಿಗೆ ಸೇರಿ ಹಲವು ಗಂಭೀರ ಅಪರಾಧ ಪ್ರಕರಣಗಳಿವೆ. ಆರೋಪಿಗಳಿಂದ 4 ದ್ವಿಚಕ್ರ ವಾಹನಗಳು ಹಾಗೂ 12,500 ರು. ವಶಪಡಿಸಿಕೊಳ್ಳಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಈ ಕುರಿತು ತನಿಖೆ ಕೈಗೆತ್ತಿಕೊಂಡ ಆರ್.ಟಿ.ನಗರ ಪೊಲೀಸರು ಕೃತ್ಯ ನಡೆದ ಪ್ರದೇಶದ ಸಿಸಿ ಟಿವಿಗಳನ್ನು ಪರಿಶೀಲಿಸಿದಾಗ ಆರೋಪಿಗಳ ಚಹರೆ ಪತ್ತೆಯಾಗಿತ್ತು. ಅದರಂತೆ ಕಾರ್ಯಾಚರಣೆ ಕೈಗೊಂಡು ನಾಲ್ವರನ್ನು ಬಂಧಿಸಿದ್ದಾರೆ. ಬಂಧಿತರ ಪೈಕಿ ಬೋಡ್ಕೆ ಇಮ್ರಾನ್ ವಿರುದ್ಧ 30 ಪ್ರಕರಣ ಮತ್ತು ಹರ್ಷಿತ್ ಅಹಮ್ಮದ್ ವಿರುದ್ಧ 21 ಪ್ರಕರಣಗಳು ದಾಖಲಾಗಿವೆ. ಆರೋಪಿಗಳಿಬ್ಬರೂ ನಗರದ ವಿವಿಧ ಪೊಲೀಸ್ ಠಾಣೆ ವ್ಯಾಪ್ತಿಗಳಲ್ಲಿ ವರದಿಯಾದ ಕೊಲೆ ಯತ್ನ, ಸುಲಿಗೆ, ದರೋಡೆ, ದ್ವಿಚಕ್ರ ವಾಹನ ಕಳವು ಸೇರಿದಂತೆ ಹಲವು ಪ್ರಕರಣಗಳಲ್ಲಿ ಜೈಲಿಗೆ ಹೋಗಿ ಬಂದಿದ್ದರು ಎಂಬುದು ವಿಚಾರಣೆಯಲ್ಲಿ ತಿಳಿದುಬಂದಿದೆ ಎಂದು ಪೊಲೀಸರು ಹೇಳಿದ್ದಾರೆ.

ಬೆದರಿಸಿ 40 ಸಾವಿರ ಸುಲಿಗೆ

ನ. 21ರಂದು ಗುಂಪೊಂದು ಆರ್.ಟಿ.ನಗರದ ಬಾರ್ ಅಂಡ್ ರೆಸ್ಟೋರೆಂಟ್‌ಗೆ ನುಗ್ಗಿಲಾಂಗ್‌ನಿಂದ ಬೆದರಿಸಿ ಕೌಂಟರ್‌ನಲ್ಲಿದ್ದ 40 ಸಾವಿರ ರು. ಸುಲಿಗೆ ಮಾಡಿತ್ತು. ಅಲ್ಲದೆ, ಡಿ.ಜೆ.ಹಳ್ಳಿ ಪೊಲೀಸ್ ಠಾಣಾ ವ್ಯಾಪ್ತಿಯ ಚಹಾ ಅಂಗಡಿಗೆ ನುಗ್ಗಿ ಮಾಲೀಕನನ್ನು ಬೆದರಿಸಿ ಆರು ಸಾವಿರ ರು. ಸುಲಿಗೆ ಮಾಡಿದ್ದರು. ಅಲ್ಲಿಂದ ತೆರಳುವಾಗ ಮೋದಿ ರಸ್ತೆಯ ಬದಿ ನಿಲ್ಲಿಸಿದ್ದ ಸಿಕ್ಕ ಕಾರು, ಆಟೋಗಳನ್ನು ದೊಣ್ಣೆಗಳಿಂದ ಹೊಡೆದು ಜಖಂಗೊಳಿಸಿದ್ದರು.

ವಿಮಾನ ನಿಲ್ದಾಣಕ್ಕೆ ಅಕ್ರಮ ಪ್ರವೇಶ: ವಶಕ್ಕೆ

ಬೆಂಗಳೂರು: ದೇವನಹಳ್ಳಿ ತಾಲೂಕಿನ ಕೆಂಪೇಗೌಡ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ನಕಲಿ ಟಿಕೆಟ್ ಮೂಲಕ ಅಕ್ರಮ ಪ್ರವೇಶ ಮಾಡಿದ ಯುವತಿಯನ್ನು ಪೊಲೀಸರು ವಶಕ್ಕೆ ಪಡೆದಿದ್ದಾರೆ.

ಹರ್ಷಿತ ಕೌರ್ ಸಾಹ್ನಿ ಬಂಧಿತ ಯುವತಿ. ತನ್ನ ಸ್ನೇಹಿತ ಆಯುಶ್ ಶರ್ಮಾ ಎಂಬಾತನನ್ನು ವಿಮಾನ ನಿಲ್ದಾಣಕ್ಕೆ ಬಿಡಲು ವಿಮಾನ ನಿಲ್ದಾಣಕ್ಕೆ ಬಂದಿದ್ದಳು. ಟಿಕೆಟ್ ಇಲ್ಲದೆ ವಿಮಾನ ನಿಲ್ದಾಣದ ಟರ್ಮಿನಲ್ ಪ್ರವೇಶಿಸಲು ಅವಕಾಶವಿಲ್ಲದ ಕಾರಣ ನಕಲಿ ಇ-ಟಿಕೆಟ್ ತಯಾರಿಸಿ ಟರ್ಮಿನಲ್ ಒಳ ಪ್ರವೇಶಿಸಿದ್ದಳು. ಟರ್ಮಿನಲ್‌ನಿಂದ ಹೊರಬರುತ್ತಿದ್ದ ವೇಳೆ ಭದ್ರತಾ ಪಡೆ ಸಿಬ್ಬಂದಿ ಪರಿಶೀಲಿಸಿದಾಗ ಆಕೆಯ ಬಳಿ ಪ್ರಯಾಣಿಸದೇ ಇದ್ದ ಇಟುಟಿಕೆಟ್ ಪತ್ತೆಯಾಗಿತ್ತು. ವಿಚಾರಿಸಿದಾಗ ಕೊನೇ ಕ್ಷಣದಲ್ಲಿ ಪ್ರಯಾಣ ರದ್ದುಗೊಳಿಸಿರುವುದಾಗಿ ತಿಳಿಸಿದ್ದಳು. ಹೀಗಾಗಿ ಟಿಕೆಟ್ ಕ್ಯಾನ್ಸಲ್ ಮಾಡಿಕೊಂಡು ಬರುವಂತೆ ಹೇಳಿದ್ದ ಭದ್ರತಾ ಸಿಬ್ಬಂದಿ, ಇಲ್ಲವಾದಲ್ಲಿ ಹೊರಬಿಡಲು ಸಾಧ್ಯವಿಲ್ಲ ಎಂದು ತಿಳಿಸಿದ್ದರು. ಅದರಂತೆ ಟಿಕೆಟ್ ಕ್ಯಾನ್ಸಲ್ ಮಾಡಿಸಲು ಇಂಡಿಗೋ ಏರ್‌ಲೈನ್ಸ್ ಕಚೇರಿಗೆ ತೆರಳಿ ಇ-ಟಿಕೆಟ್ ಅಲ್ಲಿನ ಸಿಬ್ಬಂದಿಗೆ ನೀಡಿದ್ದಳು. ಸಿಬ್ಬಂದಿ ಟಿಕೆಟ್ ಪರಿಶೀಲಿಸಿದಾಗ ವೇಳೆ ಅದು ನಕಲಿ ಎಂದು ಗೊತ್ತಾಗಿ ಆಕೆಯನ್ನು ವಿಮಾನ ನಿಲ್ದಾಣದ ಭದ್ರತಾ ಪಡೆಯ ವಶಕ್ಕೆ ನೀಡಿದ್ದರು. ಅವರು ಆಕೆಯನ್ನು ವಿಚಾರಣೆಗೊಳಪಡಿಸಿದಾಗ ಸ್ನೇಹಿತನನ್ನು ಬಿಡಲು ಟರ್ಮಿನಲ್ ಒಳಗೆ ಬರಲು ನಕಲಿ ಇ-ಟಿಕೆಟ್ ಮಾಡಿಸಿದ ಕೃತ್ಯ ಬಾಯಿ ಬಿಟ್ಟಿದ್ದಾಳೆ. ಅದರಂತೆ ಭದ್ರತಾ ಸಿಬ್ಬಂದಿ ಯುವತಿಯನ್ನು ವಿಮಾನ ನಿಲ್ದಾಣದ ಪೊಲೀಸರ ವಶಕ್ಕೆ ಒಪ್ಪಿಸಿದ್ದು, ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದಾರೆ.

ಕುಮಾರ್‌ಗೆ 14 ದಿನ ನ್ಯಾಯಾಂಗ ಬಂಧನ

ಬೆಂಗಳೂರು: ವಂಚನೆ ಪ್ರಕರಣದಲ್ಲಿ ಬಂಧಿಸಲ್ಪಟ್ಟಿರುವ 'ಬಿಟಿವಿ' ಸುದ್ದಿ ವಾಹಿನಿಯ ವ್ಯವಸ್ಥಾಪಕ ನಿರ್ದೇಶಕ ಬಿ.ಎಂ. ಕುಮಾರ್‌ನನ್ನು ನ್ಯಾಯಾಲಯ 14 ದಿನಗಳ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದೆ. ವಂಚನೆ ಪ್ರಕರಣದ ಆರೋಪಿಯಾಗಿರುವ ಬಿ.ಎಂ. ಕುಮಾರ್‌ನನ್ನು ವಿಜಯನಗರಠಾಣೆ ಪೊಲೀಸರು ನಿನ್ನೆ ಬಂಧಿಸಿ ನ್ಯಾಯಾಲಯಕ್ಕೆ ಹಾಜರುಪಡಿಸಿದ್ದರು. ವಿಚಾರಣೆ ನಡೆಸಿದ ನ್ಯಾಯಾಲಯ ಬಿ.ಎಂ. ಕುಮಾರ್‌ನನ್ನು ಮುಂದಿನ 14 ದಿನಗಳವರೆಗೆ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದೆ.

ಬಿಟಿವಿ ಸುದ್ದಿವಾಹಿನಿಯ ವ್ಯವಸ್ಥಾಪಕ ನಿರ್ದೇಶಕ ಕುಮಾರ್ ಅಲಿಯಾಸ್ ಮುನೀಂದ್ರಕುಮಾರ್ ವಿರುದ್ಧ 2020 ರಲ್ಲಿ ಅಶ್ವಿನ್ ಮಹೇಂದ್ರ ಎಂಬುವರು ವಿಜಯನಗರ ಠಾಣೆಗೆ ದೂರು ನೀಡಿದ್ದು ಎಫ್‌ಐಆರ್ ದಾಖಲಾಗಿತ್ತು. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಬಿ.ಎಂ. ಕುಮಾರ್ ನ್ಯಾಯಾಲಯದ ವಿಚಾರಣೆಗೆ ಹಾಜರಾಗದೆ ಒಂದು ವರ್ಷದಿಂದ ತಲೆ ಮರೆಸಿಕೊಂಡಿದ್ದರು. ನೋಟಿಸ್ ಜಾರಿಯಾದರೂ ವಿಚಾರಣೆಗೆ ಹಾಜರಾಗಿರಲಿಲ್ಲ. ಇದನ್ನು ಗಂಭೀರವಾಗಿ ಪರಿಗಣಿಸಿದ್ದ ನ್ಯಾಯಾಲಯ ಇತ್ತೀಚೆಗೆ ಜಾಮೀನು ರಹಿತ ವಾರೆಂಟ್ ಹೊರಡಿಸಿತ್ತು. ಆರೋಪಿ ಬಂಧನಕ್ಕೆ ವಿಶೇಷ ತಂಡ ರಚಿಸಲಾಗಿತ್ತು.

20.56 ಲಕ್ಷ ರು. ದೋಚಿದ ವಂಚಕರು

ಬೆಂಗಳೂರು: ನಿವೃತ್ತ ಸರಕಾರಿ ನೌಕರರಿಬ್ಬರಿಗೆ ಯುವತಿಯರ ಸೋಗಿನಲ್ಲಿ ಕರೆ ಮಾಡಿದ ಸೈಬರ್ ವಂಚಕರು ಬ್ಲ್ಯಾಕ್ ಮೇಲ್ ಮಾಡಿ ಬೆದರಿಸಿ ಬರೋಬ್ಬರಿ 20.56 ಲಕ್ಷ ಹಣ ದೋಚಿರುವ ಘಟನೆ ಬೆಳಕಿಗೆ ಬಂದಿದೆ. ಎರಡು ಪ್ರಕರಣಗಳ ಸಂಬಂಧ ಪಶ್ಚಿಮ ಹಾಗೂ ಉತ್ತರ ವಿಭಾಗ ಸೈಬರ್ ಕ್ರೈಂ ಠಾಣೆಗಳಲ್ಲಿ ಪ್ರತ್ಯೇಕ ದೂರು ದಾಖಲಾಗಿದೆ. ಇಬ್ಬರು ನಿವೃತ್ತ ಸರಕಾರಿ ನೌಕರರಿಗೆ ಹೊರ ರಾಜ್ಯದ ನಂಬರ್‌ನಿಂದ ವಿಡಿಯೊ ಕಾಲ್ ಮಾಡಿರುವ ವಂಚಕರು ಯುವತಿಯ ನಗ್ನ ವಿಡಿಯೊ ಬಳಸಿಕೊಂಡು ಕರೆ ಮಾಡಿ, ಬಳಿಕ ಬ್ಲ್ಯಾಕ್ ಮೇಲ್ ಮಾಡಿದ್ದಾರೆ. ಇಬ್ಬರೂ 20.56 ಲಕ್ಷ ರು. ಹಣ ಕಳೆದುಕೊಂಡಿದ್ದಾರೆ. ಈ ಬಗ್ಗೆ ಪ್ರತ್ಯೇಕ ಪ್ರಕರಣ ದಾಖಲಾಗಿದೆ. ಅಪರಿಚಿತರ ವಿರುದ್ಧ ಎಫ್ ಐ ಆರ್ ದಾಖಲಿಸಿಕೊಂಡು ಪೊಲೀಸರು ತನಿಖೆ ಮುಂದುವರೆಸಿದ್ದಾರೆ.